ಪ್ರಬಂಧ

ಎಂದರಂತೆ. ಕೈಲಾಸಂ ಹೇಳಿದರಂತೆ: 'ಸ್ವಾಮೀ, ಯಾವ ವಸ್ತು ಎಲ್ಲಿರಬಾರದೊ ಅಲ್ಲಿದ್ದರೆ ಕಸ. ಈಗ ನೀನು ಈ ಮನೆಯಲ್ಲಿ ಕಸ'. ಹೌದಲ್ಲ? ಆಲೋಚಿಸುತ್ತಾ ಹೋದರೆ ಸಮಾಜದಲ್ಲಿರುವ ನೂರಾರು ಕಸಗಳು ಹೊಳೆಯುತ್ತವೆ. ಸಹಪಯಣಿಗರಿಗೆ ಕಿರಿಕಿರಿಸುವ ಮೊಬೈಲು ಹಾಡು, ಎದೆಗೆ ಗುದ್ದುವ ಡಿಜೆ ಸದ್ದು, ಸಾರ್ವಜನಿಕ ಮೂತ್ರವಿಸರ್ಜನೆ, ಧಾರ್ಮಿಕ ಸ್ಥಳಗಳ ಮೈಕು, ಸುಳ್ಳುಸುದ್ದಿಯ ಪತ್ರಿಕೆ, ದ್ವೇಷಬಿತ್ತುವ ಟಿವಿ ಚಾನಲ್ಲುಗಳು- ದೊಡ್ಡ ಪಟ್ಟಿಯನ್ನೇ ತಯಾರಿಸಬಹುದು.

ನನ್ನ ಅರ್ಧ ಆಯುಷ್ಯ, ಬಸ್ಸು ರೈಲುಗಳಲ್ಲಿ ಮೊಬೈಲ್ ಹಾಡು ನುಡಿಸುವವರ ಜತೆ ಜಗಳದಲ್ಲಿ ಮುಗಿದಿದೆ. ಬೀದಿಯಲ್ಲಿ ಶ್ವಾನವಿಹಾರ ಮಾಡಿಸುವವರ ಜತೆ ಘನಘೋರವಾಗಿ ಕಾದಾಡಿ ಪರಾಜಿತನಾಗಿದ್ದೇನೆ. ಶ್ವಾನವಿಹಾರ ವಿರೋಧಿ ಸಂಘವೇನಾದರೂ ಏರ್ಪಟ್ಟಲ್ಲಿ ನಾನೇ ಅದರ ಅಧ್ಯಕ್ಷನಾಗುವೆ. ಪಾಶ್ಚಿಮಾತ್ಯ ದೇಶಗಳಲ್ಲಿ ನಾಯಿಲ್ಲದ ಮನೆಯಿಲ್ಲ. ಆದರೆ ಅವರು ನಾಯಿ ಮೇಯಿಸಲು ಹೊರಟರೆ ಪ್ಲಾಸ್ಟಿಕ್ ಚೀಲವನ್ನೂ ಒಯ್ಯುವರು. ಕಕ್ಕವನ್ನು ನಿಗದಿತ ಜಾಗದಲ್ಲಿ ವಿಲೇವಾರಿಸುವರು. ನಮ್ಮಲ್ಲಿ ಶ್ವಾನಮಾಲಕರು ಸ್ವಚ್ಛಂದಮತಿಗಳು. ತಮ್ಮ ಮುದ್ದುಪ್ರಾಣಿಗೆ ಕಂಡವರ ಮನೆಯ ಮುಂದೆಯೇ ವಿಸರ್ಜಿಸುವಂತೆ ಕಟ್ಟುನಿಟ್ಟಾದ ತರಬೇತಿ ನೀಡಿರುವ ಜಾಣರು. 'ನಾಯಿ ಗಲೀಜು ಮಾಡಿದರೆ ಇಂತಿಷ್ಟು ದಂಡ' ಎಚ್ಚರಿಕೆಗಳು ಅವರ ಪಾಲಿಗೆ ಕಸಕ್ಕಿಂತ ಕಡೆ. ಒಮ್ಮೆ ರಾತ್ರಿಯೂಟದ ಬಳಿಕ ತಂಪುಹವೆಯಲ್ಲಿ ವಾಕಿಸುತ್ತಿದ್ದೆ. ಬೀದಿ ನಿರ್ಜನವಾಗಿತ್ತು. ಇದಕ್ಕಿದ್ದಂತೆ ಕತ್ತಲಗರ್ಭದಿಂದ ಹೊಮ್ಮಿ ಪ್ರತ್ಯಕ್ಷವಾದ ಒಂದು ಶ್ವಾನ ಭೋಂಕರಿಸುತ್ತ ಎರಗಿತು. 'ಥೂ... ಹಚಾ' ಎಂದು ಕಿರುಚಿದೆ. ಪ್ರಾಣವೇ ಬಾಯಿಗೆ ಬಂದಿತ್ತು. ದೂರದಲ್ಲಿ ಸರಪಳಿ ಹಿಡಿದು ಬರುತ್ತಿದ್ದ ಮಾಲಕಿ 'ಥೂ ಅಂತೀರಲ್ರಿ. ಮೂಕಪ್ರಾಣಿ. ಅದಕ್ಕೂ ನೋವಾಗುತ್ತೆ. ನಮ್ಮ ಜಿಮ್ಮಿ ಇಲ್ಲಿತಂಕ ಯಾರಿಗೂ ಕಚ್ಚಿಲ್ಲ' ಎಂದರು. 'ಸರಿಯಮ್ಮ. ಜಿಮ್ಮಿ ಹುಲಿಯಂತೆ ಹಾರಿದರೆ ಏನು ಮಾಡಲಿ? ದಯವಿಟ್ಟು ಸರಪಣಿ ಹಾಕಿ ಹಿಡಿದುಕೊಳ್ಳಿ' ಎಂದೆ. 'ನೀವ್ಯಾಕ್ರಿ ಅಪರಾತ್ರೀಲಿ ವಾಕ್ ಮಾಡ್ತಾ ಇದೀರಿ ಮಲಗೋದು ಬಿಟ್ಟು?' ಎಂದರು. ಹೌದಲ್ಲವೇ? ನನ್ನದೇ ತಪ್ಪು. ನಾಯಿಗೆ ತಿಳಿ ಹೇಳಬಹುದು. ನರಮಾನವರಿಗಲ್ಲ. ಜ್ಞಾನೋದಯಕ್ಕೆ ಅಗತ್ಯವಾಗಿರುವುದು ಗುಹಾವಾಸವಲ್ಲ, ತಪಸ್ಸಲ್ಲ. ಪಕ್ಕೆಗೆ ಸತ್ಯದ ತಿವಿತ.

ಆದರೂ ನಾಗರಿಕ ಲೋಕವು ಕಸಖೋರರನ್ನು ನಿಯಂತ್ರಿಸಲು ನಾನಾ ಯತ್ನಗಳನ್ನು ಕೈಗೊಳ್ಳುತ್ತಲೇ ಇದೆ. ಮನಬಂದಲ್ಲಿ ಕಸ ಹಾಕಿದರೆ ದಂಡ ವಿಧಿಸುವ ಕಾಯಿದೆ ಪಾಸು ಮಾಡಿದೆ. ಕೆಲವರು ಕಸ ಸುರಿವ ಜಾಗದಲ್ಲಿ ದೇವರಪಟ ಇಡುವರು; ಜನಪ್ರಿಯ ನಟರ ರಾಜಕಾರಣಿಗಳ ಚಿತ್ರ ಬರೆಸುವರು. ಆದರೆ ಈ ಕಾಯಿದೆ, ದೇವರು- ನಟರು ತಮ್ಮನ್ನು ರಕ್ಷಿಸಿಕೊಳ್ಳಲಾರದೆ ಹೋಗಿದ್ದೇ ಹೆಚ್ಚು. ಕೆಲವರು 'ಇಲ್ಲಿ ಕಸ ಹಾಕುವವರರು ಮೂರ್ಖರು' ಇತ್ಯಾದಿ ಸೌಮ್ಯಭಾಷೆಯ ಫಲಕಗಳನ್ನು ನೆಟ್ಟರು. ಹತಾಶೆಯಿಂದ ಕೆಲವರು 'ಇಲ್ಲಿ ಕಸಹಾಕುವವರು ...ಮಕ್ಕಳು' ಎಂದು ಬರೆಸಿದರು. ಮಂದಿ ಜಗ್ಗಲಿಲ್ಲ. ಸಿಸಿಟಿವಿ ಕ್ಯಾಮೆರಾ ಅಳವಡಿಸಿದ ಬಳಿಕ ಪರಿಸ್ಥಿತಿ ತುಸು ಹತೋಟಿಗೆ ಬಂದಿತು. ಆದರೆ ಕಸಗಾರರು ಯಾವುದೇ ಉಪಕ್ರಮವನ್ನು ಸೋಲಿಸುವ ಪ್ರತಿತಂತ್ರ ಶೋಧಿಸುವರು. ಇದಕೆ ಸಂಶಯವಿಲ್ಲ.

ಸಮಸ್ಯೆಯೆಂದರೆ, ವಿಧಿನಿಷೇಧದ ಶಾಸನ ಹಾಕುವವರಿಗೆ ತಾವು ಬಳಸುವ ಭಾಷೆಯಲ್ಲಿ ಸ್ತ್ರೀನಿಂದೆಯಿದೆ ಎಂಬ ಖಬರಿಲ್ಲದಿರುವುದು. ಭಾಷೆಯ ಅಸೂಕ್ಷ್ಮ ಬಳಕೆಯೂ ಕಸೋತ್ಪಾದನೆಯೇ. ನಮ್ಮ ರಾಜಕಾರಣದ, ವ್ಯಾಟ್ಸಾಪು ವಿಶ್ವವಿದ್ಯಾಲಯಗಳ, ಟೀವಿ ಆ್ಯಂಕರುಗಳ ಭಾಷೆ ಕೊಳೆಯತೊಡಗಿ ವರ್ಷಗಳೇ ಆದವು. ಶಾಲಾ ಕಾಲೇಜು, ಪಠ್ಯಪುಸ್ತಕ, ಯೋಗಶಾಲೆ, ಸಾಹಿತ್ಯ ನಾಟಕಾದಿ ಕಲೆಗಳು ಮನದ ಹೊಲದಲ್ಲಿ ಬೆಳೆವ ಪ್ರಳಯದ ಕಸವನ್ನು ನಿವಾರಿಸಬೇಕು. ಆದರೆ ಅವೇ ವಿಷ ಹುಟ್ಟಿಸುತ್ತಿವೆ. ಎಂತಲೇ ಬಸವಣ್ಣ ಆರ್ತವಾಗಿ ಕೇಳಿದರು: 'ತಾಯ ಮೊಲೆವಾಲು ನಂಜಾಗಿ ಕೊಲುವಡೆ ಇನ್ನಾರಿಗೆ ದೂರುವೆ ಕೂಡಲಸಂಗಮ ದೇವಾ?' 'ಕವಿರಾಜಮಾರ್ಗ'ದಲ್ಲಿ ಕಸ-ಕಸವರಗಳನ್ನು ಒಂದೇ ಮಾಡುವವರ ಬಗ್ಗೆ ವಿಷಾದಕರ ಪ್ರಸ್ತಾಪವಿದೆ. ಮತ್ತೊಬ್ಬರ ಧರ್ಮವನ್ನು ವಿಚಾರವನ್ನು ಸಹಿಸುವುದೇ ದಿಟವಾದ